**OS-88/2018**
**PW-1**

**ದಿನಾಂಕಃ 30.05.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಹೆಚ್ ಎನ್ ಬಿ ಎನ್ **ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಈ ದಾವೆಯನ್ನು ಎಂಟು ಜನರ ವಿರುದ್ದ ಸಲ್ಲಿಸಿರುತ್ತೇನೆ. 22 ಗುಂಟೆ ಜಮೀನು ನಮಗೆ ಬಿಟ್ಟು ಕೊಡಬೇಕು ಎಂದು ಈ ದಾವೆ ಸಲ್ಲಿಸಿರುತ್ತೇವೆ. ಸದರಿ ಜಮೀನಿನ ಸರ್ವೆ ನಂಬರ್ 105, 103, 102, 100 ಆಗಿರುತ್ತದೆ. ಸಾಕ್ಷಿದಾರರು ಮುಂದುವರೆದು, ಸದರಿ ಸರ್ವೆ ನಂಬರ್ ಗಳ ಜಮೀನಿಗೆ ನಮ್ಮ 22 ಗುಂಟೆ ಜಮೀನು ಹೊಂದಿಕೊಂಡಿರುತ್ತದೆ. ಸದರಿ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ 102 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂಬರ್ 105 ರ ಜಮೀನು, ಉತ್ತರಕ್ಕೆ ಸರ್ವೆ ನಂಬರ್ 100 ರ ಜಮೀನು, ದಕ್ಷಿಣಕ್ಕೆ ಸರ್ವೆ ನಂಬರ್ 100 ಮತ್ತು 103 ರ ಜಮೀನು ಆಗಿರುತ್ತದೆ. ಸದರಿ ಚೆಕ್ಕು ಬಂದಿಯನ್ನು ನಾನು ನನ್ನ ವಾದ ಪತ್ರದಲ್ಲಿ ನಮೂದಿಸಿರುತ್ತೇನೆ. ಸದರಿ 22 ಗುಂಟೆ ಜಮೀನಿಗೆ ಸಂಬಂದಿಸಿದಂತೆ ನನ್ನ ಬಳಿ ದಾಖಲೆ ಇರುತ್ತದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನನ್ನ ತಾತನ ಹೆಸರು ಮಂಚೇಗೌಡ ಯಾನೆ ಕುಪ್ಪೀಗೌಡ. ಸದರಿ ಮಂಚೇಗೌಡ ಯಾನೆ ಕುಪ್ಪೀಗೌಡ ರವರಿಗೆ 4 ಜನ ಮಕ್ಕಳು ಅವರೆಂದರೆ ಮಂಚೇಗೌಡ, ಮಾದೇಗೌಡ, ಸಣ್ಣೇಗೌಡ, ಸುಬ್ಬೇಗೌಡ. ನನ್ನ ತಂದೆ ಮಂಚೇಗೌಡ ರವರು 1996 ರಲ್ಲಿ ಮರಣ ಹೊಂದಿರುತ್ತಾರೆ. ದಾವಾ ಅನುಸೂಚಿ ಸ್ವತ್ತು ನಮ್ಮ ಕುಟುಂಬದ ಪಾಲು ಪಾರಿಕತ್ತಿನಲ್ಲಿ ನನ್ನ ಭಾಗಕ್ಕೆ ಬಂದಿರುತ್ತದೆ. ಸದರಿ ಪಾಲು ಪಾರಿಕತ್ತು ನನ್ನ ತಂದೆಯ ಜೀವಿತಾವದಿಯಲ್ಲಿ ಆಗಿರುತ್ತದೆ. ಸದರಿ ಪಾಲು ಪಾರಿಕತ್ತು ಯಾವ ದಿನಾಂಕದಂದು ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಪಾಲು ಪಾರಿಕತ್ತನ್ನು ನಾನು ಈ ದಾವೆಯಲ್ಲಿ ಹಾಜರು ಪಡಿಸಿರುವುದಿಲ್ಲ. ಸದರಿ ಪಾಲು ಪಾರಿಕತ್ತು ನನ್ನ ಬಳಿ ಇದ್ದರೆ ಅದನ್ನು ತಂದು ಹಾಜರು ಪಡಿಸುತ್ತೇನೆ.

ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ 1 ರಿಂದ 3 ನೇ ಪ್ರತಿವಾದಿಗಳಿಗೆ ನೋಟೀಸ್ ನೀಡಿರುವುದಿಲ್ಲ.

ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ